ಪ್ರಕಾಶಕರು ಕರೆ ಮಾಡಿದರು. ಮುದ್ರಣದ ಮಾನ್ಯತೆ ನನ್ನ ಕಥೆಗಳಿಗೆ! ಅಭಿಮಾನದಿಂದ ಬೀಗಿ ಹೋದೆ. ಅಭಾವದ ಪರಿಸ್ಥಿತಿಯಲ್ಲಿ ಐವತ್ತು ಸಾವಿರ ರೂಪಾಯಿಗಳನ್ನು ಒಟ್ಟಿಗೆ ಕಳೆದುಕೊಳ್ಳುವುದನ್ನು ನೆನೆದಾಗ ಸಂಕಟವೆನಿಸಿತು.

ಖ್ಯಾತ ವಿಮರ್ಶಕರು, ಓದುಗರು, ನನ್ನ ಪುಸ್ತಕವನ್ನು ಮೆಚ್ಚಿ ಬರೆಯುತ್ತಾರೆ. ಮಾಸಪತ್ರಿಕೆಗಳಲ್ಲಿ, ವಾರಪತ್ರಿಕೆಗಳಲ್ಲಿ, ಸಾದರ ಸ್ವೀಕಾರಗಳಲ್ಲಿ ನನ್ನ ಪುಸ್ತಕದ ಹೆಸರು ವಿಜೃಂಭಿಸುತ್ತದೆ. ಹೊಸ ಯುವ ಕಥಾ ಪ್ರತಿಭೆಯ ಉದಯ ಎಂಬ ರೀತಿಯಲ್ಲಿ ಸಂಭ್ರಮಿಸುವುದನ್ನು ಕನಸು ಕಾಣುತ್ತಾ ಮಲಗಿದೆ. ಫೇಸ್‌ಬುಕ್‌ನಲ್ಲೆಲ್ಲ ನನ್ನ ಕಥಾಸಂಗ್ರಹದ ಬಗ್ಗೆ ಓದುಗರು ಪೋಸ್ಟ್ ಮಾಡುತ್ತಿರುತ್ತಾರೆ.

ರಾತ್ರಿಯಲ್ಲಿ ಮಳೆ ಸುರಿದಿತ್ತು. ಕನಸಿನ ನಡುವೆ ನಾನು ಪ್ರಿಯಾಳನ್ನು ಎಚ್ಚರಿಸಿ ನನ್ನ ಜೊತೆ ಮಲಗಿಸಿಕೊಂಡೆ. ಐವತ್ತು ಸಾವಿರ ಇದ್ದಿದ್ದರೆ, ನಾವೊಂದು ಡಬ್ಬಲ್ ಕಾಟ್ ಕೊಳ್ಳಬಹುದಾಗಿತ್ತು.

ಮುಸಲಧಾರೆ ಸುರಿದಂತಾಗಿ ನಾನು ಆಯಾಸದಿಂದ ಪ್ರಿಯಾಳ ತಲೆಗೂದಲಿನಲ್ಲಿ ಮುಖವನ್ನು ಮುಚ್ಚಿ ಮಲಗಿದೆ. ಅವಳು ಪ್ರೀಯಿಂದ ನನ್ನ ತಲೆಕೂದಲಿನೊಳಗೆ ಬೆರಳಾಡಿಸುತ್ತಿದ್ದಳು.

ಮರುದಿನ ಪ್ರಕಾಶಕರ ಫೋನ್ ಬಂತು. 'ನಿಮಗೆ ಕೊಡಬೇಕಾದ ಆಥರ್ಸ್ ಕಾಪಿಯ ಐದು ಪ್ರತಿಗಳನ್ನು ಕೊರಿಯರ್ ಮಾಡಲಾಗಿದೆ. ರಿವ್ಯೂಗೆಲ್ಲ ನಾವೇ ಕಳಿಸುತ್ತೇವೆ'. ನಕಾರಾತ್ಮಕ ಚಿಂತೆಗಳೆಲ್ಲವನ್ನೂ ನಾನು ಮರೆಮಾಚಿದೆ.

ಕನಸಿನ ಮುಂದಿನ ಭಾಗವಾಗಿತ್ತು, ಸ್ವಂತ ಡಿಟಿಪಿ ಸೆಂಟರ್, ಪ್ರಕಾಶಕ ಸಂಸ್ಥೆ. ಸಂಭಾವನೆ, ಪ್ರಕಾಶಕರು ಹೂಡಿದ ಹಣವೆಲ್ಲ ಮರಳಿ ಸಿಗುವಂತಾಗಬೇಕು. ಯಾವುದೇ ಆತಂಕ, ಅನುಮಾನಗಳಿಗೆ ಆಸ್ಪದವಿಲ್ಲ. ಒಟ್ಟು ಒಂದು ಸಾವಿರ ಪ್ರತಿಗಳನ್ನು ಅಚ್ಚು ಹಾಕಿಸಬೇಕು. ಸ್ವತಃ ಡಿಟಿಪಿ ಸೆಂಟರ್‌ನಲ್ಲಿ ಕೆಲಸ ಮಾಡಿದ್ದುದ್ದರಿಂದ ಖರ್ಚು ವೆಚ್ಚಗಳ ಅರಿವಿತ್ತು. ನನ್ನ ನೆಚ್ಚಿನ ಕಥೆಗಾರ ಹೇಳಿದ್ದರಿಂದ, ಪ್ರಕಾಶಕ ಸಣ್ಣ ಮೊತ್ತಕ್ಕೆ ಒಪ್ಪಿಕೊಂಡಿದ್ದೆನಿಸಿತು. ಆದರೆ ಲೇಖಕ ಮತ್ತು ಪ್ರಕಾಶಕನ ನಡುವೆ ಯಾವುದೇ ರೀತಿಯ ಲಿಖಿತ ಒಪ್ಪಂದವಿಲ್ಲ. ಈ ವಿಷಯವನ್ನು ಮೊದಲು ಎತ್ತಿದ್ದು ಶ್ರೀ ಕುಮಾರ್. ಆ ಪ್ರಶ್ನೆ ಮೊದಲು ನನ್ನನ್ನು ಗೊಂದಲಕ್ಕೆ ತಳ್ಳಿತು. ನಾನು ಪ್ರಕಾಶಕರನ್ನು ಭೇಟಿ ಮಾಡಿ ವಿಷಯ ತಿಳಿಸಿದೆ. ಆತ ನಕ್ಕು, 'ನನ್ನ ಮೇಲೆ ನಿಮಗೆ ನಂಬಿಕೆ ಇಲ್ವಾ' ಎಂದರು.

ಕೊರಿಯರ್ ಬಂದಿದ್ದು ಡಿಟಿಪಿ ಸೆಂಟರ್‌ಗೆ. ಕಥಾಸಂಗ್ರಹದ ಐದು ಪ್ರತಿಗಳು. ಹೆರಿಗೆಯ ನಂತರ ಅಮ್ಮನಿಗೆ ಮಗುವನ್ನು ನೋಡುವ ಕಾತರದಂತೆ, ನಾನು ಪುಸ್ತಕವನ್ನು ತೆರೆದು ನೋಡಿದೆ. ಎದೆ ಧಸಕ್ಕೆಂದಿತು. ಪುಸ್ತಕದ ಮುದ್ರಣ ಪೇಲವಗೊಂಡಿತ್ತು. ಮುಖಪುಟದ ಚಿತ್ರ ಮಾಸಲಾಗಿತ್ತು. ಒಳಪುಟಗಳೂ ಅಷ್ಟಕಷ್ಟೆ. ನನಗೆ ಅಳು ಬಂದುಬಿಟ್ಟಿತ್ತು. ಎಲ್ಲೋ ಒಂದೆಡೆ ನನ್ನ ತಪ್ಪಾಗಿದೆ. ಮನಸ್ಸು ಪ್ರಕ್ಷುಬ್ಧಗೊಂಡಿತು. ನಾನು ಪ್ರಕಾಶಕರ ನಂಬರಿಗೆ ಫೋನ್ ತಿರುಗಿಸಿದೆ. ಆದರೆ ಆತ ಫೋನ್ ಎತ್ತಿಕೊಳ್ಳುವ ಲಕ್ಷಣವೇ ಕಾಣಿಸಲಿಲ್ಲ. ಕೊನೆಗೆ ನನ್ನನ್ನು ಪ್ರಕಾಶಕರನ್ನು ಪರಿಚಯಿಸಿದ ನನ್ನ ನೆಚ್ಚಿನ ಕಥೆಗಾರನಿಗೆ ಫೋನ್ ಮಾಡಿದೆ. ಅವರು ಆಡಿದ ಮಾತುಗಳಿಂದ ನನಗೆ ಬವಳಿ ಬಂದಂತಾಯಿತು.

'ಮನೋಜ್, ಆತ ಈ ನಡುವೆ ಇಂತಹ ಚಿಲ್ಲರೆ ಕೆಲಸಗಳನ್ನು ಮಾಡುತ್ತಿದ್ದಾನೆ. ಲೇಖಕರಿಂದ ಹಣ ಪಡೆದು ಆಥರ್ಸ್ ಕಾಪಿ ಅಂತ ಐದು ಪ್ರತಿಗಳನ್ನು ಕೊಡುತ್ತಾನೆ. ಅಸಲಿಗೆ ಪುಸ್ತಕ ಹೊರಬರುವುದೇ ಇಲ್ಲ. ಈ ವಿಷಯವನ್ನು ಕೆಲವರು ನನ್ನಲ್ಲಿ ಹೇಳಿಕೊಂಡಾಗಲೇ ಗೊತ್ತಾಗಿದ್ದು. ಸಾರಿ ಮನೋಜ್, ನಾನು ಮೊದಲೇ ನಿನಗೆ ಹೇಳಬೇಕಿತ್ತು. ಮರೆತುಬಿಟ್ಟೆ'.

ನನ್ನ ನೆಚ್ಚಿನ ಕಥೆಗಾರ, ಗುರುವಿನ ಮಾತು ಕೇಳಿ ನನಗೇನೂ ತೋಚಲಿಲ್ಲ. ಅಳಲೇ ನಗಲೇ...

ನನ್ನ ಮುಖದಲ್ಲಾದ ತೀವ್ರ ಮುಖಭಾವನೆಯನ್ನು ನಮ್ಮ ಆಫೀಸ್‌ನ ಮೇಡಂ ವಿಚಾರಿಸಿದರು.

'ಏನು ಮನೋಜ್ ಏನಾಗಿದೆ? ಏಕೆ ಒಂಥರ ಇದ್ದೀರಲ್ಲ?'

'ಮೇಡಂ ನನ್ನ ಐವತ್ತು ಸಾವಿರ ರೂಪಾಯಿಗಳನ್ನು ಒಬ್ಬ ಕಳ್ಳ ಲಪಟಾಯಿಸಿದ.'

ಅವರು ಮತ್ತಷ್ಟು ಗಾಬರಿಯಿಂದ ನನ್ನತ್ತ ನೋಡಿದರು. ಸಂಜೆ ಮನೆಗೆ ಹೋದರೆ ಪ್ರಿಯಾಳನ್ನು ಸಮಾಧಾನ ಪಡಿಸುವುದಾದರೂ ಹೇಗೆಂದು ತಿಳಿಯದೆ ನಾನು ಮತ್ತಷ್ಟು ಆತಂಕಕ್ಕೊಳಗಾದೆ.

●